# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.36/2014**

**ದೋ.ಸಾ. : 15 ಫ್ರಾ.ಸಾ. : 11**

| | | |
|---|---|---|
| ಸಾಕ್ಷಿಯ ಹೆಸರು | : | ಚಂದನ ಕುಮಾರ ಈಶ್ವರ ಚಡಿಯಪ್ಪ |
| ತಂದೆಯ ಹೆಸರು | : | ಈಶ್ವರ ಚಡಿಯಪ್ಪ |
| ವಯಸ್ಸು | : | 40 ವರ್ಷ |
| ಕೆಲಸ | : | ಚಾಲಕ |
| ವಾಸ | : | ರಾಜೀವನಗರ, ಕದ್ರಾ |

**ದಿನಾಂಕಃ 03-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದಿಃ 15-02-2014 ರಂದು ಕದ್ರಾ ಪೊಲೀಸರು ಪಂಚನಾಮೆಗಾಗಿ ನನ್ನನ್ನು ಠಾಣೆಗೆ ಕರೆಸಿದ್ದರು. ಆ ಸಮಯದಲ್ಲಿ ಠಾಣೆಯಲ್ಲಿ ಚಾಸಾ-14 ರವರ ಸಹ ಹಾಜರಿದ್ದರು. ಪೊಲೀಸರು ಮೃತ ಬಾಲಕ ಸತ್ಯ ನಾರಾಯಣ ಮೂರ್ತಿಯ ಬಟ್ಟೆಗಳನ್ನು ತಂದು ಹಾಜರಪಡಿಸಿದ್ದು, ಅವುಗಳಲ್ಲಿ ಒಂದು ನೇರಳೆ ಬಣ್ಣದ ಅಂಗಿ ಹಾಗೂ ಒಂದು ನೀಲಿ ಬಣ್ಣದ ಚಡ್ಡಿ ಇರುತ್ತದೆ. ಸದರಿ ಬಟ್ಟೆಗಳಿಗೆ ರಕ್ತ ತಾಗಿರುತ್ತದೆ. ಅವುಗಳನ್ನು ಪೊಲೀಸರು ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡು, ಜಪ್ತು ಪಂಚನಾಮೆಯನ್ನು ಮಾಡಿ, ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಜಪ್ತು ಪಂಚನಾಮೆಯನ್ನು 08-15 ರಿಂದ 08-45 ರ ವರೆಗೆ ಮಾಡಿರುತ್ತಾರೆ, ಆದರೆ ಅದು ಬೆಳಿಗ್ಗೆ ಅಥವಾ ಸಂಜೆ ಎಂದು ನನಗೆ ಈಗ ನೆನಪಿಲ್ಲ. ಸದರಿ ಜಪ್ತು ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-23(ಬಿ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದೆ ಇರುವ ಮೃತ ಬಾಲಕ ಸತ್ಯ ನಾರಾಯಣ ಮೂರ್ತಿಯ ಚಡ್ಡಿ ಮತ್ತು ಅಂಗಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು-17 ಮತ್ತು 18 ಎಂದು ಗುರುತಿಸಲಾಗಿರುತ್ತದೆ. ಅವುಗಳ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆ ಮಾಲು-17(ಬಿ) ಮತ್ತು ಮುದ್ದೆ ಮಾಲು-18(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ**

2. ಪೋಲಿಸರು ಪಂಚನಾಮೆಯನ್ನು ಮಾಡಿದಾಗ ರಾತ್ರಿ ಸಮಯ 08-15 ರಿಂದ 08-45 ಆಗಿತ್ತು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

3. ಪೊಲೀಸರು ಪಂಚನಾಮೆಗೆ ಬರುವಂತೆ ಯಾವುದೇ ನೋಟಿಸ್ ನೀಡಿಲ್ಲ, ಆದರೆ ಮನೆಯ ಹತ್ತಿರ ಬಂದು ಕರೆದಿರುತ್ತಾರೆ. ಪೊಲೀಸರು ನಮ್ಮ ಮನೆಯ ಹತ್ತಿರ ಬಂದಾಗ, ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಪೊಲೀಸ್ ಠಾಣೆಯಲ್ಲಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಪೊಲೀಸ್ ಠಾಣೆಯಲ್ಲಿ ಬಟ್ಟೆಗಳನ್ನು ನೋಡಿದಾಗ, ಅವುಗಳು ಲಕೋಟೆಯಲ್ಲಿದ್ದು, ಸೀಲ್ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಅದರ ಮೇಲೆ ಇದ್ದ ಸೀಲ್ ನ್ನು ಯಾರು ಹಾಕಿದ್ದರು ಎಂದು ನನಗೆ ಗೊತ್ತಿಲ್ಲ. ಮುದ್ದೆ ಮಾಲು-17 ಮತ್ತು 18 ಬಟ್ಟೆಗಳನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮುದ್ದೆಮಾಲುಗಳನು ಜಪ್ತು ಪಂಚನಾಮೆಯ ಕಾಲಕ್ಕೆ ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು-17 ಮತ್ತು 18 ಬಟ್ಟೆಗಳು ಮೃತ ಸತ್ಯ ನಾರಾಯಣ ಮೂರ್ತಿಗೆ ಸಂಬಂದಿಸಿದ್ದು ಅಲ್ಲ ಎಂದರೆ ಸರಿಯಲ್ಲ. ನಿಪಿ-23 ಜಪ್ತು ಪಂಚನಾಮೆ ಕೈ ಬರಹದಲ್ಲಿತ್ತು. ಸದರಿ ಪಂಚನಾಮೆಯಲ್ಲಿ ಬಟ್ಟೆಗಳ ಬಗ್ಗೆ ವಿವರಣೆ ಯಾವ ಪುಟದಲ್ಲಿ ಇರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಅದೇ ರೀತಿ ಪಂಚನಾಮೆಯ ಯಾವ -ಯಾವ ಪುಟಗಳಲ್ಲಿ ಏನೇನು ಬರೆದಿದ್ದಾರೆ ಎಂದು ಸಹ ನನಗೆ ಹೇಳಲು ಬರುವುದಿಲ್ಲ. ಪಂಚನಾಮೆಯನ್ನು ಬರೆದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ನನ್ನ ಜೊತೆಯಲ್ಲಿ ಚಾಸಾ-14 ರವರೂ ಸಹ ಪಂಚನಾಮೆಗೆ ಸಹಿ ಮಾಡಿರುತ್ತಾರೆ. ನಮ್ಮಿಬ್ಬರನ್ನು ಬಿಟ್ಟು ಬೇರೆ ಇನ್ನಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

4. ನಾನು ಪೊಲೀಸ್ ಠಾಣೆಗೆ ಹೋದಾಗ ಈಗಾಗಲೇ ಪೊಲೀಸರು ಪಂಚನಾಮೆಯನ್ನು ಬರೆದಿದ್ದು, ಅದಕ್ಕೆ ನನ್ನ ಮತ್ತು ಚಾಸಾ-14 ರವರ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ಬಟ್ಟೆಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಈ ಪ್ರಕರಣಕ್ಕಾಗಿ ಪೊಲೀಸರು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ